ಅನುಬಂಧ-I

ಮೂಡಬಿದ್ರೆ ಮೊರಾರ್ಜಿದೇಸಾಯಿ ವಸತಿ ಶಾಲೆ

353(56) ಶ್ರೀ.ಕೆ.ಅಭಯಚಂದ್ರ (ಮೂಡಬಿದ್ರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮೂಡಬಿದ್ರೆ ಮೊರಾರ್ಜಿದೇಸಾಯಿ ವಸತಿ ಶಾಲೆಯಲ್ಲಿ ಮಕ್ಕಳಿಗೆ ಸ್ಥಳವಕಾಶ ತೊಂದರೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಈ ವಸತಿ ಶಾಲಾ ಕಟ್ಟಡದ ಕಾಮಗಾರಿಯು ಜೂನ್ 2003ರ ಒಳಗೆ ಪೂರ್ಣಗೊಳಿಸಲಾಗುವುದೇ?

3. ಈ ಅವಧಿಯಲ್ಲಿ ಕಟ್ಟಡ ಪೂರ್ತಿಯಾಗದೆ ಇದ್ದರೆ ಕಾಮಗಾರಿ ಪೂರ್ಣಗೊಳಿಸಲು ಎಷ್ಟು ಸಮಯ ಬೇಕಾಗಬಹುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

1. ಹೌದು

2. ನಿರ್ಮಾಣ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

3. ಉದ್ಭವಿಸುವುದಿಲ್ಲ

ಲಿಂಗಸುಗೂರು ತಾಲ್ಲೂಕಿನಲ್ಲಿ ಮೂರಾರ್ಜಿ ದೇಸಾಯಿ ವಸತಿ ಶಾಲೆಗಳ ಕಳಪೆ ಕಾಮಗಾರಿ

355(347) ಶ್ರೀ ಅಮರೇಗೌಡ ಪಾಟೀಲ್ ಭಯ್ಯಾಪುರ (ಲಿಂಗಸಗೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಒಟ್ಟು ಎಷ್ಟು ಮೊರಾರ್ಜಿದೇಸಾಯಿ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ; (ವಿವರವನ್ನು ನೀಡುವುದು)

2. ಸದರಿ ವಸತಿ ಶಾಲೆಗಳ ನಿರ್ಮಾಣ ಕಾಮಗಾರಿಗಳು ಯಾವ ಸಂಸ್ಥೆಯವರು ಯಾವ ಆಧಾರದ ಮೇಲೆ ಮಾಡುತ್ತಿದ್ದಾರೆ?

3. ಸದರಿ ಸಂಸ್ಥೆಗೆ ನಿರ್ಮಾಣ ಮಾಡುವಲ್ಲಿ ಸರ್ಕಾರವು ಕಾಲ ಮಿತಿಯನ್ನು ನಿಗಧಿಪಡಿಸಿದೆಯೇ?

4. ಲಿಂಗಸಗೂರು ತಾಲ್ಲೂಕಿಗೆ ಮಂಜೂರಾದ ಮೊರಾರ್ಜಿದೇಸಾಯಿ ವಸತಿ ಶಾಲೆಯ ಕಾಮಗಾರಿ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

1. ವಿವರಗಳನ್ನು ಅನುಬಂಧ-I ರಲ್ಲಿ ನೀಡಾಗಿದೆ

2. ಕೇಂದ್ರ ರಾಜ್ಯ ಸರ್ಕಾರ ಸ್ವಾಮ್ಯದ ಸಂಸ್ಥೆಗಳಿಗೆ ಮತ್ತು ಖಾಸಗಿ ಸಂಸ್ಥೆಗಳಿಗೆ ಕಾಮಗಾರಿಗಳನ್ನು ಕಾಮಗಾರಿಗಳನ್ನು, ಸ್ಪರ್ಧಾತ್ಮಕ ದರ ಪಡೆದು ಕನಿಷ್ಟ ಟೆಂಡರ್ ದರಗಳ ಆಧಾರದ ಮೇಲೆ ಈ ಕೆಳಕಂಡ ಏಜೆನ್ಸಿಗಳಿಗೆ ವಹಿಸಲಾಗಿದೆ.

1. ಕೇಂದ್ರ	2. ರಾಜ್ಯ	3. ಖಾಸಗಿ
1. ಎಡ್-ಸಲ್-11	1. ಕೆಎಸ್ಎಸ್ಐಡಿಸಿ -5	1. ಇಸಿಐಎಲ್-1
2. ಎನ್‌ಬಿಸಿಸಿ-1	2. ಕೆ.ಎಲ್.ಎ.ಸಿ.-4	2. ಎನ್‌ಸಿಸಿಎಲ್-9
3. ಎನ್‌ಪಿಸಿಸಿ-16		3. ಎಂಸಿಸಿ -2
4. ಮೆಕಾನ್-10		4. ಐಸಿಆರ್‌ಎಲ್-2
ಒಟ್ಟು 39	9	14

3. ಹೌದು

4. ಕಾಮಗಾರಿ ಕಳಪೆಯಾಗಿರುವ ಬಗ್ಗೆ ದೂರು ಬಂದಿದೆ. ಮುಖ್ಯ ಅಭಿಯಂತರರು (ಸಂಪರ್ಕ ಮತ್ತು ಕಟ್ಟಡ) ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ, ಇವರಿಗೆ ಕಾಮಗಾರಿಯ ಗುಣಮಟ್ಟದ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಲು ಕೋರಲಾಗಿತ್ತು. ಮುಖ್ಯ ಅಭಿಯಂತರರು (ಸಂಪರ್ಕ ಮತ್ತು ಕಟ್ಟಡ) ಇವರ ವರದಿ ದಿನಾಂಕ: 20/5/2002ರ ಪ್ರಕಾರ ಗುಣಮಟ್ಟ ತೃಪ್ತಿಕರವಾಗಿರುವುದು ಕಂಡು ಬರುತ್ತದೆ.

ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆ ಕುರಿತು

356(648) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಗಣಿಗಾರಿಕೆಗೆ ಪರವಾನಗಿ ನೀಡಿದ ಒಟ್ಟು ಸಂಖ್ಯೆ ಎಷ್ಟು;

ಆ. ಕಳೆದ ಸಾಲಿನಲ್ಲಿ ನೀಡಿದ ಪರವಾನಗಿಗಳ ಸಂಖ್ಯೆ ಎಷ್ಟು;

ಇ. ಎಷ್ಟು ಅರ್ಜಿಗಳು ಪರವಾನಗಿಗಾಗಿ ಬಾಕಿ ಇದೆ;

ಈ. ಈ ಅರ್ಜಿಗಳ ಏಲೇವಾರಿಗೆ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

1. ಒಂದು. ಕುದುರೆಮುಖ ಕಬ್ಬಿಣ ಅದಿರು ಕಂಪೆನಿ ಲಿಮಿಟೆಡ್

2. ಯಾವುದೂ ಇಲ್ಲ.

3. ಎರಡು ಅರ್ಜಿಗಳು ಬಾಕಿ ಉಳಿದಿರುತ್ತವೆ.

4. ಸದರಿ ಅರ್ಜಿಗಳು ಪಶ್ಚಿಮಘಟ್ಟ ಪ್ರದೇಶದ ವ್ಯಾಪ್ತಿಯಲ್ಲಿರುವುದರಿಂದ ಇವುಗಳನ್ನು ತಿರಸ್ಕರಿಸಲಾಗುವುದು.

ಒಳನಾಡು ಮೀನುಗಾರರಿಗೆ ವಸತಿ ಗೃಹ

357(649) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮೀನುಗಾರರಿಗೆ ಪ್ರಸಕ್ತ ಸಾಲಿನಲ್ಲಿ ವಸತಿ ಗೃಹ ನಿರ್ಮಿಸಲು ಮಂಜೂರಾದ ಮೊತ್ತ ಎಷ್ಟು? ಇದುವರೆಗೆ ಖರ್ಚಾದ ಮೊತ್ತ ಎಷ್ಟು? (ಜಿಲ್ಲಾವಾರು ವಿವರ ಒದಗಿಸುವುದು);

2. ಈ ಮೊತ್ತದಲ್ಲಿ ಒಳನಾಡು ಮೀನುಗಾರರಿಗೆ ಮಂಜೂರಾದ ಮೊತ್ತ ಎಷ್ಟು ?(ಜಿಲ್ಲಾವಾರು ವಿವರಗಳನ್ನು ಒದಗಿಸುವುದು)